**ಹಿರಿಯ ಶ್ರೇಣಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC No. 312/2023**

**PW-3 CW-5**

| | | |
|---|---|---|
| ಸಾಕ್ಷಿದಾರನ ಹೆಸರು | : | ಆದೆಮ್ಮ ಗಂಡ ಗಂಗಪ್ಪ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಮಸೀದಾಪೂರ |
| ಪ್ರಮಾಣಿಕರಿಸಿದ ದಿನಾಂಕ | : | 07-11-2024 |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ಚಾಸಾ-1 ನನ್ನ ಮಗಳು. ಚಾಸಾ-4 ನನ್ನ ಗಂಡ. ಚಾಸಾ-2, 3 ಮತ್ತು 6 ರಿಂದ 9 ರವರ ಪರಿಚಯ ಇದೆ. 1 ನೇ ಆರೋಪಿ ನನ್ನ ಅಳಿಯ. 2 ಮತ್ತು 3 ನೇ ಆರೋಪಿತರು ನನ್ನ ಬೀಗರು.

ನನ್ನ ಮಗಳ ಮತ್ತು 1 ನೇ ಆರೋಪಿಯ ಮದುವೆಯಾಗಿ ಅಂದಾಜು 09 ವರ್ಷ ಆಗಿರುತ್ತದೆ. ನನ್ನ ಮಗಳಿಗೆ ಈಗ ಇಬ್ಬರು ಮಕ್ಕಳಿರುತ್ತಾರೆ. ಎರಡು ಮಕ್ಕಳಾಗುವವರೆಗೂ ನನ್ನ ಮಗಳು ಮತ್ತು ಅಳಿಯ ಚೆನ್ನಾಗಿದ್ದರು. ಆರೋಪಿತರು ವಿನಾಃಕಾರಣ ನನ್ನ ಮಗಳಿಗೆ ಹೊಡೆ-ಬಡೆ ಮಾಡುತ್ತಿದ್ದರು ಮತ್ತು ಕೊಲೆ ಮಾಡು ತಿಪ್ಪೆಯಲ್ಲಿ ಹಾಕುತ್ತೇವೆ ಎಂದು ಹೇಳುತ್ತಿದ್ದರು. ನನ್ನ ಮಗಳನ್ನು ಹೊಡೆ-ಬಡೆ ಮಾಡಿ ಕೊಲೆ ಮಾಡುತ್ತಾರೆ ಎಂದು ನನ್ನ ಮಗಳನ್ನು ತವರು ಮನೆಗೆ ಕರೆದುಕೊಂಡು ಬಂದಿರುತ್ತೇವೆ. ಮದುವೆಯ ಸಂದರ್ಭದಲ್ಲಿ 1 ನೇ ಆರೋಪಿಗೆ 6 ತೊಲೆ ಬಂಗಾರ 2 ಲಕ್ಷ ರೂ. ನೀಡಿರುತ್ತೇವೆ.

ಈಗ ಕಳೆದ 04 ವರ್ಷಗಳ ಹಿಂದೆ ಆರೋಪಿತರು ನಮ್ಮ ಮನೆಗೆ ಬಂದು ರಾತ್ರಿ 8-00 ಗಂಟೆಗೆ ಹೊಡೆದಿರುತ್ತಾರೆ, ಪಕ್ಕದ ಮನೆಯವರು ಜಗಳ ಬಿಡಿಸಿರುತ್ತಾರೆ. ಈ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಆರ್.ಕೆ ವಕೀಲರಿಂದ.**

ನಾನು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ. ನಂತರ ಸಾಕ್ಷಿ ಹೇಳಿಕೆ ಕೊಟ್ಟಿರುವುದಾಗಿ ನುಡಿಯುತ್ತಾರೆ. ನಮ್ಮ ಮನೆಗೆ 1 ರಿಂದ 3 ನೇ ಆರೋಪಿತರು ಬಂದು ಜಗಳ ಮಾಡಿರುತ್ತಾರೆ. ಸದರಿ ಆರೋಪಿತರು ನಮ್ಮ ಮನೆಗೆ ಹೇಗೆ ಬಂದಿರುತ್ತಾರೆ ನನಗೆ ಗೊತ್ತಿಲ್ಲ. ಪೊಲೀಸ ಠಾಣೆಗೆ ನನ್ನ ಮಗಳು ದೂರು ನೀಡಿರುತ್ತಾಳೆ. ಈಗ ಕಳೆದ 04 ವರ್ಷಗಳಿಂದ ನನ್ನ ಮಗಳು ನಮ್ಮ ಮನೆಯಲ್ಲಿ ಇರುತ್ತಾಳೆ. ಘಟನೆ ಆಗುವ ಪೂರ್ವದಲ್ಲಿ ಒಂದು ವರ್ಷದಿಂದ ನನ್ನ ಮಗಳು ನನ್ನ ತವರು ಮನೆಯಲ್ಲಿ ಇದ್ದಳು. ನನ್ನ ಮಗಳಿಗೆ ಆರೋಪಿತರು ಕಿರುಕುಳ ನೀಡುತ್ತಿದ್ದುದ್ದರಿಂದ

ತವರು ಮನೆಯಲ್ಲಿ ಇದ್ದಳು. ನನ್ನ ಮಗಳ ಮಗಳಿಗೆ ಈಗ 05 ವರ್ಷ ಮುಗಿದಿರುತ್ತದೆ. ಸದರಿ ಘಟನೆಯಲ್ಲಿ ನನ್ನ ಕೈಗೆ ಗಾಯಗಳಾಗಿದ್ದು ರಾಜೋಳಿ ವೈದ್ಯರ ಬಳಿ ಚಿಕಿತ್ಸೆ ಪಡೆದಿರುತ್ತೇನೆ.

ನನ್ನ ಮಗಳು ತನ್ನ ಗಂಡನೊಂದಿಗೆ ಬೇರೆ ಮನೆ ಮಾಡು ಎಂದು ವಾದ ಮಾಡುತ್ತಿದ್ದಳು ಎಂದರೆ ಸರಿಯಲ್ಲ. ನಾವು ಬೇರೆ ಮನೆ ಮಾಡಿಸುವಂತೆ ನನ್ನ ಮಗಳಿಗೆ ಪ್ರಚೋದನೆ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನನ್ನ ಮಗಳಿಗೆ ಮತ್ತು ನನಗೆ ನನ್ನ ಅಳಿಯ ನಮ್ಮ ತಂದೆ-ತಾಯಿಯೊಂದಿಗೆ ಇರುತ್ತೇವೆ ಎಂದು ಹೇಳಿರುತ್ತಾನೆ ಎಂದರೆ ಸರಿಯಲ್ಲ. ಬೇರೆ ಮನೆ ಮಾಡುವವರೆಗೆ ಬರುವುದಿಲ್ಲ ಎಂದು ತವರು ಮನೆಗೆ ತಾನಾಗಿಯೇ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಪ್ರಕರಣ ದಾಖಲಿಸಿದರೆ ಬೇರೆ ಮನೆ ಮಾಡುತ್ತಾನೆ ಎಂದು ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮಗಳು 04 ವರ್ಷದ ಹಿಂದೆ ಆರೋಪಿತರು ವರದಕ್ಷಿಣೆ ತರುವಂತೆ ಹೊಡಿ-ಬಡಿ ಮಾಡಿ ಕಿರುಕುಳ ನೀಡುತ್ತಿದ್ದು ಪ್ರಾಣ ಬೆದರಿಕೆ ಹಾಕುತ್ತಿದ್ದಾರೆ ಎಂದು ತಿಳಿಸಿರುತ್ತಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ 4-5 ದಿನಗಳು ಬಿಟ್ಟು ಆರೋಪಿತರು ಮಸೀದಪೂರ ಗ್ರಾಮಕ್ಕೆ ಬಂದು ನಮಗೆ ಹೊಡೆದು ಜಗಳ ತೆಗೆದು, ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ಆಗದೇ ಇದ್ದರೂ ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.